## ಪ್ರಥಮ ದರ್ಜೇ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC No. 804/2024**

**CW: 03 PW : 02**

## ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 28.02.2026

| | |
|---|---|
| ಹೆಸರು | : ಮಹ್ಮದ ರಫೀಕ ಖುರೇಷಿ |
| ತಂದೆಯ ಹೆಸರು | : ಮಹ್ಮದ ಇಬ್ರಾಹಿಂ |
| ವಯಸ್ಸು | : 49 |
| ಉದ್ಯೋಗ | : ಕೂಲಿ |
| ವಾಸಸ್ಥಳ | : ಹಳೇ ಶಹಾಬಾದ |

**<u>ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>**

ನನಗೆ ಚಾಸಾ-1, 2 ಮತ್ತು 16 ಇವರ ಪರಿಚಯ ಇರುತ್ತದೆ. ಈ ಹಂತದಲ್ಲಿ ಸಾಕ್ಷಿದಾರರಿಗೆ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಿದ್ದು, ಅದು ಗುನ್ನಾ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿ.ಪಿ.1 ಎಂದು ನಿಶಾನೆಗೊಳಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು ನಿ.ಪಿ.1 (ಬಿ) ನಿಶಾನೆಗೊಳಿಸಲಾಯಿತು. ಸದರಿ ಪಂಚನಾಮೆಯನ್ನು ದಿ: 12/02/2024 ರಂದು ಜರುಗಿಸಿದ್ದು ಇರುತ್ತದೆ.

ಪಂಚನಾಮೆಯನ್ನು 1.15 ರ ಸುಮಾರಿಗೆ ಮಾಡಿರುತ್ತಾರೆ. ಪಂಚನಾಮೆಗೆ ಜಾಗೆಯನ್ನು ಪೋಲೀಸರು ತೋರಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಜಮಾತ ಖಾನದಲ್ಲಿ ಮಾಡಿರುತ್ತಾರೆ. ಮುಂದುವರೆದು ಸಾಕ್ಷಿದಾರರು ನಮ್ಮನ್ನು ಪಂಚನಾಮೆಯ ಉದ್ದೇಶ ತಿಳಿಸಿ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಬಂದು ಹೋಗಿರುವ ಕುರಿತು ಒಂದು ದಾಸ್ತಾವೇಜಿನ ಮೇಲೆ ಸಹಿ ಪಡೆದುಕೊಂಡಿರುತ್ತಾರೆ.

ನಿ.ಪಿ.2 ಜಮಾತ ಖಾನಿನ ಭಾವಚಿತ್ರವಾಗಿರುತ್ತದೆ. ಯಾವ ಕಾರಣಕ್ಕಾಗಿ ನಿ.ಪಿ.2 ತೆಗೆದಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಇದನ್ನು ಹೊರತುಪಡಿಸಿ ಬೇರೆ ವಿಚಾರ ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>**

ಸದರಿ ಪಂಚನಾಮೆಯನ್ನು ಬೆಳಿಗ್ಗೆ 8.30 ರಿಂದ 9.30 ಗಂಟೆಯವರೆಗೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆಯನ್ನು ಚಾಸಾ-16 ಇವರು ಜರುಗಿಸಿರುತ್ತಾರೆ ಎಂದರೆ ಸರಿ. ನಿ.ಪಿ.2 ಪಂಚನಾಮೆ ಸಮಯದಲ್ಲಿ ತೆಗೆದಿರುವ ಭಾವಚಿತ್ರವಾಗಿರುತ್ತದೆ ಎಂದರೆ ಸರಿಯಲ್ಲ. ಹಳೇ ಶಹಾಬಾದಿನ ಡಾ: ಜಾಕೀರ ಹುಸೇನ ಚೌಕ ಬಳಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಪಂಚನಾಮೆಯನ್ನು ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಚಾಸಾ-16 ರವರು ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿ.

ದಿ: 11/02/2024 ರಂದು 7.30 ರ ಸುಮಾರಿಗೆ ಚಾಸಾ-1 ಇವರು ಆರೋಪಿತನು ತನ್ನ ವಾಟ್ಸ ಅಪ ಸ್ಟೇಟಸ್ ನಲ್ಲಿ ಮುಸ್ಲಿಂ ಸಮುದಾಯದ ಪವಿತ್ರ ಸ್ಥಳವಾದ ಖಾಬಾ ಷರೀಫ ಕುರಿತು ಅವಹೇಳನಕಾರಿ ಹೇಳಿಕೆ ಇಟ್ಟಿರುವ ಕುರಿತು ಭಾತ್ಮಿಯ ಮೇರೆಗೆ ಪಂಚನಾಮೆಯನ್ನು ಜರುಗಿಸಿದ್ದು ಇರುತ್ತದೆ ಎಂದರೆ ಸರಿ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ</u>**

ನಾನು ಆರೋಪಿ ಇಟ್ಟಿರುವ ವಾಟ್ಸ ಅಪ ಸ್ಟೇಟಸನ್ನು ನೋಡಿರುವುದಿಲ್ಲ ಎಂದರೆ ಸರಿ. ಅದರ ಕುರಿತು ನನಗೆ ಯಾವುದೇ ವೈಯುಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಾನು ನಮ್ಮ ಮಸೀದಿಯಲ್ಲಿ ಕುಳಿತಾಗ ಪೋಲೀಸರು ಕರೆದಿರುವ ಕಾರಣ ಸ್ಥಳಕ್ಕೆ ಹೋಗಿದ್ದು ಇರುತ್ತದೆ. ನಿ.ಪಿ.1 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಪೋಲೀಸರ ಹೇಳಿಕೆಯ ಮೇಲೆ ನಿ.ಪಿ.1 ರ ಮೇಲೆ ಸಹಿ ಹಾಕಿರುತ್ತೇನೆ ಎಂದರೆ ಸರಿ. ಪೋಲೀಸರ ಮಾತನ್ನು ಕೇಳಿ ನಾನು ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿ.

ನಿ.ಪಿ.1 ರಂತೆ ಪಂಚನಾಮೆಯನ್ನು ಮಾಡಿ ನಿ.ಪಿ.2 ರಂತೆ ಭಾವ ಚಿತ್ರವನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ನಿ.ಪಿ.2 ನಮ್ಮ ಮಸೀದಿಗೆ ಸಂಬಂಧಿಸಿದ ಭಾವಚಿತ್ರವಾಗಿರುತ್ತದೆ ಎಂದರೆ ಸರಿ. ಸದರಿ ಭಾವಚಿತ್ರ ಪಂಚನಾಮೆಗೆ ಸಂಬಂಧ ಪಟ್ಟ ಭಾವಚಿತ್ರ ಆಗಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

Sd/-

**ಪ್ರ.ದ.ನ್ಯಾ.ದಂ ಗಳು, ಶಹಾಬಾದ**